# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 2091 (2480)

ಸದಸ್ಯರ ಹೆಸರು : ಶ್ರೀ ಪಿ. ಆರ್.ರಮೇಶ್

(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 23.03.2022

ಉತ್ತರಿಸುವ ಸಚಿವರು : ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯಿಂದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳೆಷ್ಟು ; (ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಒಟ್ಟು 08 ಯೋಜನೆಗಳು ಜಾರಿಯಲ್ಲಿರುತ್ತವೆ.<br>ಯೋಜನೆಗಳ ವಿವರಗಳನ್ನು ಅನುಬಂಧ - **"ಎ"** ನಲ್ಲಿ ಒದಗಿಸಿದೆ. |
| (ಆ) | ಮುಂಬರುವ ವರ್ಷದಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯಿಂದ ನೂತನ ಯೋಜನೆಗಳನ್ನು ಜಾರಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ? (ಇದ್ದಲ್ಲಿ, ಯೋಜನೆಗಳ ವಿವರ ನೀಡುವುದು) | ಮುಂಬರುವ ವರ್ಷದಲ್ಲಿ ಜಾರಿ ಮಾಡಲು ಉದ್ದೇಶಿಸಿರುವ ನೂತನ ಯೋಜನೆಗಳ ವಿವರಗಳನ್ನು ಅನುಬಂಧ - **"ಬಿ"** ನಲ್ಲಿ ಒದಗಿಸಿದೆ. |

ಸಂಖ್ಯೆ:ಮೂಲಅಇ 19 ಯುಐಪಿ 2022

**(ವಿ. ಸೋಮಣ್ಣ)**

ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# ಅನುಬಂಧ-ಎ

ಪ್ರಸಕ್ತ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ
ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳ ವಿವರ

(ರೂ ಲಕ್ಷಗಳಲ್ಲಿ)

| ಕ್ರ.ಸ | | ಕಾರ್ಯಕ್ರಮ / ಯೋಜನೆ | ಆಯವ್ಯಯ ಅಂದಾಜು 2021-22 |
|---|---|---|---|
| **ವಿಮಾನ ನಿಲ್ದಾಣಗಳ ಯೋಜನೆಗಳು** | | | |
| 01 | Revenue | *3451-00-090-1-18-059- Regional Air Connectivity other expenses.(ಪ್ರಾದೇಶಿಕ ವಾಯು ಸಂಪರ್ಕ – ಇತರೆ ಖರ್ಚುಗಳು)* | 4700.00 |
| 02 | Revenue | *3451-00-090-1-11-071 - Development of Minor Airports Building Expenses (ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ – ಕಟ್ಟಡ ವೆಚ್ಚಗಳು)* | 504.00 |
| 03 | Capital | *5465-01-190-1-05-132- Development of Minor Airports –Capital Expenses (ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ–ಬಂಡವಾಳ ವೆಚ್ಚಗಳು)* | 40000.00 |
| | | **ಒಟ್ಟು ಮೊತ್ತ** | 45,204.00 |
| **ರೈಲ್ವೆ ಯೋಜನೆಗಳು** | | | |
| 04 | Capital | *5465-01-190-3-04-211- K - RIDE - RoB/ RuB project – Investment (ಕೆ.ಆರ್.ಐ.ಡಿ.ಇ– ಮೇಲ್ಸೇತುವೆ/ಕೆಳಸೇತುವೆ ಯೋಜನೆ – ಬಂಡವಾಳ ಹೂಡಿಕೆ)* | 6000.00 |
| 05 | Capital | *5465-01-190-3-05-132 Cost Sharing Railway projects- Capital Expenses(ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ–ಬಂಡವಾಳ ವೆಚ್ಚಗಳು)* | 96788.00 |
| 06 | Capital | *5465-01-190-3-05-133* Special Development Plan (ವಿಶೇಷ ಅಭಿವೃದ್ಧಿ ಯೋಜನೆ) | 6212.00 |
| | | **ಒಟ್ಟು ಮೊತ್ತ** | 1,09,000.00 |
| **ಪಿಪಿಪಿ ಕೋಶ** | | | |
| 07 | Revenue | *3451-00-090-1-06-059 –PPP (Developmnental Activities Other Expenses (ಪಿಪಿಪಿ ಅಭಿವೃದ್ಧಿ ಕಾರ್ಯಕ್ರಮಗಳು ಇತರೆ ಖರ್ಚುಗಳು)* | 267.00 |
| 08 | Capital | *5465-01-190-1-20-211- Karnataka Viability Gap Investment.(ಕರ್ನಾಟಕ ಸ್ಥಿತ್ಯಂತರ–ಬಂಡವಾಳ ಹೂಡಿಕೆ)* | 226.00 |
| | | **ಒಟ್ಟು ಮೊತ್ತ** | 493.00 |
| | | ಸಂಯೋಜಿತ ಒಟ್ಟು ಮೊತ್ತ | 1,54,697.00 |

ಸಂಖ್ಯೆ:ಮೂಅಇ 19 ಯುಐಪಿ 2022

(ಕಲಾವತಿ ಎಸ್ ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲ ಸಾರಿಗೆ ಇಲಾಖೆ.

# ಅನುಬಂಧ-ಬಿ

**2022-23 ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಜಾರಿ ಮಾಡಲು ಉದ್ದೇಶಿಸಿರುವ ಯೋಜನೆಗಳ ವಿವರ**

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಯೋಜನೆಗಳ ವಿವರ | ಅಂದಾಜು ವೆಚ್ಚ |
|---|---|---|
| 1 | 2 | |
| 1 | ಕರ್ನಾಟಕ ರಾಜ್ಯದಲ್ಲಿ ರೈಲ್ವೆ ಸಾಂದ್ರತೆಯನ್ನು ಹೆಚ್ಚಿಸುವ ಮೂಲಕ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ನಮ್ಮ ಸರ್ಕಾರವು ನಿರ್ಧರಿಸಿದೆ. ಒಂಭತ್ತು ನೂತನ ರೈಲ್ವೆ ಮಾರ್ಗ ನಿರ್ಮಾಣವನ್ನು ರೈಲ್ವೆ ಇಲಾಖೆಯೊಂದಿಗೆ ಶೇ.50:50ರ ವೆಚ್ಚ ಹಂಚಿಕೆಯ ಆಧಾರದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಗಿಣಿಗೇರಾ-ರಾಯಚೂರು, ತುಮಕೂರು-ರಾಯದುರ್ಗ, ಗದಗ-ವಾಡಿ, ಕುಡಚಿ-ಬಾಗಲಕೋಟೆ, ಶಿವಮೊಗ್ಗ-ಶಿಕಾರಿಪುರ-ರಾಣಿಬೆನ್ನೂರು, ತುಮಕೂರು-ಚಿತ್ರದುರ್ಗ-ದಾವಣಗೆರೆ, ಚಿಕ್ಕಮಗಳೂರು-ಬೇಲೂರು ಹಾಗೂ ಬೇಲೂರು- ಹಾಸನ ರೈಲು ಮಾರ್ಗ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. | -- |
| 2 | 55 ಕಿ.ಮೀ. ಉದ್ದದ ಗದಗ-ಯಲವಿಗಿ ನೂತನ ರೈಲು ಮಾರ್ಗ ಯೋಜನೆಯನ್ನು ರೂ.640 ಕೋಟಿ ಅಂದಾಜು ವೆಚ್ಚದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಭೂಸ್ವಾಧೀನ ವೆಚ್ಚವನ್ನು ಭರಿಸಿ ಕೇಂದ್ರದ ಪಾಲಿನೊಂದಿಗೆ ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. | 640.00 |
| 3 | ಉತ್ತರ ಕರ್ನಾಟಕದ ಬಹುದಿನಗಳ ನಿರೀಕ್ಷೆಯ ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆಯನ್ನು ರೂ.927 ಕೋಟಿ ಅಂದಾಜು ವೆಚ್ಚದಲ್ಲಿ ತ್ವರಿತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. | 927.00 |
| 4 | ಕೇಂದ್ರ ಸರ್ಕಾರವು 460 ಕಿ.ಮೀ. ಉದ್ದದ ಚೆನ್ನೈ-ಬೆಂಗಳೂರು-ಮೈಸೂರು ಹೈಸ್ಪೀಡ್ ರೈಲು ಕಾರಿಡಾರ್ ಅನ್ನು ನಿರ್ಮಿಸಲು National High Speed Railway Project ರವರಿಂದ ವಿಸ್ತೃತ ಯೋಜನಾ ವರದಿಯನ್ನು (DPR) ಸಿದ್ಧಪಡಿಸುತ್ತಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಲಿದೆ. | -- |
| 5 | ಹೆದ್ದಾರಿಗಳಲ್ಲಿ ವಾಹನ ದಟ್ಟಣೆ ತಡೆಯಲು 20 ನೂತನ ರೈಲ್ವೆ/ ರಸ್ತೆ ಮೇಲ್ಸೇತುವೆಗಳನ್ನು ರೈಲ್ವೆ ಇಲಾಖೆಯೊಂದಿಗೆ ವೆಚ್ಚ ಹಂಚಿಕೆ ಮಾದರಿಯಲ್ಲಿ ನಿರ್ಮಿಸಲು ತೀರ್ಮಾನಿಸಿದೆ. | -- |
| 6 | ರಾಯಚೂರಿನಲ್ಲಿ ಗ್ರೀನ್-ಫೀಲ್ಡ್ ವಿಮಾನ ನಿಲ್ದಾಣವನ್ನು ಜಿಲ್ಲಾ ಖನಿಜ ನಿಧಿ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಆರ್ಥಿಕ ನೆರವಿನೊಂದಿಗೆ ರೂ.186 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದೊಂದಿಗೆ ಒಡಂಬಡಿಕೆಯನ್ನು ಮಾಡಲಾಗುವುದು. | 186.00 |

| | | |
|---|---|---|
| 7 | ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗುವುದು. | -- |
| 8 | ಕೇಂದ್ರ ಸರ್ಕಾರದ ನೆರವಿನೊಂದಿಗೆ ಮೈಸೂರು ವಿಮಾನ ನಿಲ್ದಾಣದ ರನ್‌ವೇ ಯನ್ನು ವಿಸ್ತರಿಸಲಾಗುವುದು. | -- |
| 9 | ರಾಜ್ಯದಲ್ಲಿ ವಾಯುಮಾರ್ಗ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಲು ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಪಿ.ಪಿ.ಪಿ ಮಾದರಿಯಡಿ ಹೆಲಿಪೋರ್ಟ್‌ಗಳನ್ನು ರೂ. 30 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. | 30.00 |

ಸಂಖ್ಯೆ:ಮೂಅಇ 19 ಯುಏಪಿ 2022

(ಕಲಾವತಿ ಎಸ್.ಎನ್.)

ಸರ್ಕಾರದ ಅಧೀನ ಕಾರ್ಯದರ್ಶಿ-1,

ಮೂಲಸೌಲಭ್ಯ ಬಂದರು ಮತ್ತು

ಒಳನಾಡು ಜಲಸಾರಿಗೆ ಇಲಾಖೆ